# ಭಾಗ 2:

# ನಮಗಾಗಿ ದೇವರ ಪೂರ್ವಾಪರ ಸಂದರ್ಭ

**ದೇವರನ್ನು ಅರ್ಥಮಾಡಿಕೊಳ್ಳಲಿಕ್ಕೆ ನಮಗಾಗಿ ಆತನು ಸಾಕಷ್ಟು ಚಿಕ್ಕವನಾಗಿದ್ದರೆ, ಆರಾಧಿಸಲಿಕ್ಕೆ ನಮಗಾಗಿ ಆತನು ಸಾಕಷ್ಟು ದೊಡ್ಡವನಾಗಿರುವುದಿಲ್ಲ.**

"ವಾಸ್ತವಿಕತೆ" ಎಂದು ನಾವು ಕರೆಯುವ ದೊಡ್ಡ ಚಿತ್ರದೊಳಗಿಂದ ಅರ್ಥ ಮಾಡಿಕೊಳ್ಳಬೇಕಾದರೆ, ಪ್ರತಿಯೊಂದೂ ಅದಿರುವಂತೆ ಯಾಕೆ ಇರುತ್ತದೆ ಎಂಬುದನ್ನು ನಾವು ಆಲೋಚಿಸತಕ್ಕದ್ದು. ಮೊದಲನೆಯ ಭಾಗದಲ್ಲಿ ನಾವು ಬಿಟ್ಟಲ್ಲಿಂದ ಪ್ರಾರಂಭಿಸಬಹುದು. ಸರ್ವವ್ಯಾಪಿ, ಸರ್ವಜ್ಞಾನಿ ಮತ್ತು ಸರ್ವ ಶಕ್ತನಾದ ದೇವರ ಮಹತ್ವವನ್ನು ಅನ್ವೇಷಿಸಿದ್ದೇವೆ. ಇವು ಆತ್ಮನಾಗಿರುವ ದೇವರ ಮೂಲಸತ್ವದ ಮೂಲ ಸಂಗತಿಗಳಾಗಿವೆ.

ದೇವರ ಸ್ವಾಭಾವದೊಳಗಿಂದ ಹೊರಟು ಬರುವ ಕೆಲವು ಪರಿಣಾಮಗಳ ಬಗ್ಗೆ ಸಂಕ್ಷೇಪವಾಗಿ ಮಾತಾಡಿದೆವು. ಈಗ ಈ ಮುಖ್ಯ ಪ್ರಸ್ತಾಪವನ್ನು ತೆಗೆದು ಕೊಂಡು ಅದನ್ನು ಹೆಚ್ಚು ಪೂರ್ಣವಾಗಿ ಬೆಳೆಸೋಣ. ಇದನ್ನು ಮಾಡುವ ಅವಶ್ಯಕತೆ ಇದೆಣಿ ಇಲ್ಲದಿದ್ದರೆ ನಾವು ದೇವರನ್ನು ಒಂದು ಲೀತಿಯ ಪರೋಪಕಾಲಿ, ದೂರದಲ್ಲಿರುವಾತನು, ಕ್ರೋಢೀಕರಿಸಲ್ಪಟ್ಟ "ಬಲ" ಆಗಿದ್ದಾನೆಂದು ಯೋಚಿಸುವಂಥವರಾಗುತ್ತೇವೆ. ಸರ್ವ ಜ್ಞಾನಿಯಾದ ದೇವರು ಈ ಸಮಸ್ಯೆಯನ್ನು ತಿಳಿದವನಾಗಿರುವನೆಂಬುದು ನಿಜ. ಹಾಗೂ ಆತನನ್ನು ಕುರಿತು ಹೆಚ್ಚು ವಿಶೇಷವಾಗಿ ನಮಗೆ ಪರಿಚಯ ಮಾಡಿಕೊಡಲು ಕಾರ್ಯ ಕೈಕೊಂಡನು. ಆತನು ತೆಗೆದು ಕೊಂಡ ಕಾರ್ಯವು ಈ ವಿಭಾಗದ ಶೀರ್ಷಿಕೆ, "ನಮಗಾಗಿ ದೇವರ ಪೂರ್ವಾಪರ ಸಂದರ್ಭ" ಎಂಬುದರಲ್ಲಿ ಒಳಗೊಂಡಿರುತ್ತದೆ.

ನಮಗಾಗಿ ದೇವರ ಸನ್ನಿವೇಶದ ಬಗ್ಗೆ ನಾವು ಮಾತಾಡುವಾಗ, ಆತನು ಹೇಗೆ ಅಸ್ತಿತ್ವಕ್ಕೆ ಬಂದನು ಎಂಬುದರೊಂದಿಗೆ ನಾವು ಹೋರಾಟ ಮಾಡುವದಿಲ್ಲ. ಆತನ ಅಸ್ತಿತ್ವವು ಕೊಡಲ್ಪಟ್ಟಿದೆ. ಅದರ ಬದಲು ಉಳಿದ ಎಲ್ಲವೂ, ನಮ್ಮನ್ನೂ ಒಳಗೊಂಡು *ಹೇಗೆ ಮತ್ತು ಯಾಕೆ ಅಸ್ತಿತ್ವದಲ್ಲಿ ಬಂದವು ಎಂಬುದರೊಂದಿಗೆ ನಾವು ಹೋರಾಡುತ್ತೇವೆ. ನಾವು ಇರುವ ಲೀತಿಯಲ್ಲಿ ಯಾಕೆ ಇದ್ದೇವೆ? ನಮ್ಮ ಜಗತ್ತು ಅದು ಇರುವಂತೆ ಯಾಕೆ ಇದೆ?*

ಈ ಪ್ರಶ್ನೆಗಳಿಗೆ ಉತ್ತರಗಳು ನಮಗೆ ಹೇಗೆ ಸಹಾಯ ಮಾಡುತ್ತವೆ? ಇಂದಿನ ದಿನಕ್ಕಿಂತ ಹೆಚ್ಚಾದ ಸಂಗತಿಗಳನ್ನು ನಾವು ಯಾಕೆ ಚಿಂತಿಸಬೇಕು? ಇದೆಲ್ಲದರಲ್ಲಿ ದೇವರ "ಅಸಕ್ತಿ"ಯು ಯಾವುದಿದೆ? ನಮ್ಮ ಮುಂದಿರುವ ಸವಾಲು ಭಯಪಡಿಸುವಂಥದ್ದಾಗಿದೆ. ಹೀಗಿದ್ದರೂ ಅಂಥ ವಿಷಯಗಳ ಬಗ್ಗೆ ಸಂಬಂಧಿಸಿರುವದನ್ನು ತಿರಸ್ಕರಿಸಿದರೆ ದ್ವಂದ್ವ ಜೀವಿತಗಳಿಗೆ ನಮ್ಮನ್ನು ಒಪ್ಪಿಸಿಕೊಳ್ಳುತ್ತೇವೆ. ಯಾವ ಮಾರ್ಗವನ್ನು ಅನುಸರಿಸಬೇಕು ಹಾಗೂ ಎಲ್ಲಿ ಅದೆಲ್ಲವೂ "ಮುಗಿಯುತ್ತದೆ" ಎಂಬುದರ ಅನಿಶ್ಚಿತತೆಯಲ್ಲಿ ಇರುವೆವು.

ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟು ಮಾಡಿದನು. ಭೂಮಿಯು ಕ್ರಮವಿಲ್ಲದೆಯು ಬರಿದಾಗಿಯೂ ಇತ್ತು. ... ದೇವರ ಆತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು (ಆದಿಕಾಂಡ 1:1, 2).

ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಮುಖಾಂತರ ಮಾತಾಡಿದ ದೇವರು ... ನಮ್ಮ ಸಂಗಡ ತನ್ನ ಕುಮಾರನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದ್ದಾನೆ. ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು (ಇಬ್ರಿಯ 1:1, 2).

ಆದಿಯಲ್ಲಿ ವಾಕ್ಯವಿತ್ತುಣಿ ಆ ವಾಕ್ಯವು ದೇವರ ಬಳಿಯಲ್ಲಿತ್ತುಣಿ ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬಾತನು ಆದಿಯಲ್ಲಿ ದೇವರ ಬಳಿಯಲ್ಲಿ ಇದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತುಣಿ ... ಆತನಲ್ಲಿ ಜೀವವಿತ್ತುಣಿ ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು (ಯೋಹಾನ 1:1-4).